# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1981 |
| ಸದಸ್ಯರ ಹೆಸರು | : | ಶ್ರೀ.ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : | 24-03-2026 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗದಗ-ಬೆಟಗೇರಿ ನಗರದ ಎರಡನೇ ಹಂತದ ಕುಡಿಯುವ ನೀರಿನ ಯೋಜನೆ ಪೂರ್ಣಗೊಂಡಿದೆಯೇ; (ವಿವರವಾದ ಮಾಹಿತಿ ನೀಡುವುದು) | ಗದಗ-ಬೆಟಗೇರಿ ನಗರಕ್ಕೆ ಅಮೃತ್-2.0 ಯೋಜನೆಯಡಿ ಸಮಗ್ರ ಕುಡಿಯುವ ನೀರು ಸರಬರಾಜು ಅಭಿವೃದ್ಧಿಗಾಗಿ ಸರ್ಕಾರಿ ಆದೇಶ ಸಂಖ್ಯೆ: ನಅಇ 21 ಸಿಎಸ್ಎಸ್ (ಭಾ-1), ದಿನಾಂಕ:02-12-2023 ಹಾಗೂ ರಾಜ್ಯ ಮಟ್ಟದ ಉನ್ನತ ಸಂಚಲನಾ ಸಮಿತಿ (SHPSC) ನಡಾವಳಿ ದಿನಾಂಕ:27-05-2024 ರ ಅನುಸಾರ ರೂ.43.66 ಕೋಟಿ ಮೊತ್ತಕ್ಕೆ ಅನುಮೋದನೆಯಾಗಿರುತ್ತದೆ. ಈ ಕುರಿತು ಅಮೃತ್-2.0 ಯೋಜನಾ ಸಮಾಲೋಚಕರ ಮೂಲಕ ವಿಸ್ತೃತ ಯೋಜನಾ ವರದಿ (DPR)ಯನ್ನು ತಯಾರಿಸಲಾಗುತ್ತಿದೆ. |
| ಆ) | ಗದಗ-ಬೆಟಗೇರಿ ನಗರದ ಪ್ರತಿ ವಾರ್ಡಿಗೆ ಪ್ರಸ್ತುತ ಎಷ್ಟು ದಿನಕ್ಕೊಮ್ಮೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ; (ಮಾಹಿತಿ ನೀಡುವುದು) | ಗದಗ-ಬೆಟಗೇರಿ ನಗರದ ಪ್ರತಿ ವಾರ್ಡಿಗೆ 07 ರಿಂದ 08 ದಿನಗಳಿಗೊಮ್ಮೆ ನೀರು ಪೂರೈಕೆ ಮಾಡಲಾಗುತ್ತಿದೆ. |
| ಇ) | ಸದರಿ ನಗರದ ಕುಡಿಯುವ ನೀರಿನ ಯೋಜನೆ ಅಡಿ ಪಾಪನಾಶ ಗ್ರಾಮದ ನೀರು ಶುದ್ಧೀಕರಣ ಘಟಕದಿಂದ ಗದಗ ನಗರಕ್ಕೆ ಬರುವ ಇಂಜಿನಿಯರ್ ಕಾಲೇಜು ಹತ್ತಿರ ಇರುವ 'ಎ' ಪಾಯಿಂಟ್‌ವರೆಗೆ ಇರುವ ಬಿಡಬ್ಲ್ಯೂಎಸ್ ಪೈಪ್ ಪದೆ ಪದೆ ಒಡೆಯುತ್ತಿರುವುದರಿಂದ ಮತ್ತು ಕಳಪೆ ಕಾಮಗಾರಿ ಆಗಿರುವುದರಿಂದ ನೀರಿನ ವಿತರಣೆಯಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರವಾದ ಮಾಹಿತಿ ಒದಗಿಸುವುದು) | ಬಂದಿದೆ.<br>ಪಾಪನಾಶ ಗ್ರಾಮದ ನೀರು ಶುದ್ಧೀಕರಣ ಘಟಕದಿಂದ ಗದಗ ನಗರಕ್ಕೆ ಬರುವ ಇಂಜಿನಿಯರ್ ಕಾಲೇಜು ಹತ್ತಿರ ಇರುವ 'ಎ' ಪಾಯಿಂಟ್‌ವರೆಗೆ ಇರುವ ಬಿಡಬ್ಲ್ಯೂಎಸ್ ಪೈಪ್ ಪದೆ ಪದೆ ಒಡೆಯುತ್ತಿರುವುದರಿಂದ ಅಮೃತ್-2.0 ಯೋಜನೆಯಡಿ ಪರಿಹಾರವನ್ನು ಯೋಜನಾ ಸಮಾಲೋಚಕರು ಪರಿಶೀಲಿಸುತ್ತಿರುತ್ತಾರೆ. |

ಕಡತ ಸಂಖ್ಯೆ:ನಅಇ 54 ಪಿಆರ್‌ಜೆ 2026

**(ಬಿ. ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು